**28ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ನಗರ**

**ಸಿ.ಸಿಃ 23182/2021 DW-1**

| | |
|---|---|
| ಸಾಕ್ಷಿದಾರರ ಹೆಸರು | ಎನ್.ಸಿ ಪುಟ್ಟಸ್ವಾಮಿ |
| ತಂದೆಯ ಹೆಸರು | ಚಿಕ್ಕಬೊರೇ ಗೌಡ |
| ವಯಸ್ಸು | 57 ವರ್ಷ |
| ಉದ್ಯೋಗ | ಖಾಸಗಿ ಕೆಲಸ |
| ವಾಸಸ್ಥಳ | ಬೆಂಗಳೂರು |
| ದಿನಾಂಕ | 07/08/2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು |

**ಮುಖ್ಯ ವಿಚಾರಣೆಃ ಆರೋಪಿ ಪರ ಶ್ರೀ CD ವಕೀಲರಿಂದಃ**

1. ನಾನು 2019 ನೇ ಇಸವಿಯಲ್ಲಿ ಪಿರ್ಯಾದಿ ಕಂಪನಿಯಿಂದ 04 ಲಕ್ಷ ರೂಗಳ ಸಾಲ ಪಡೆದಿದ್ದೇನು. ಪಿರ್ಯಾದಿ ಕಂಪನಿಯು ನನಗೆ ಸಾಲ ಕೊಡುವ ಮುನ್ನ 01 ಲಕ್ಷಕ್ಕೆ 25 ಸಾವಿರ ರೂಗಳಂತೆ ನನ್ನಿಂದ 01 ಲಕ್ಷ ರೂಗಳವರೆಗೆ ಪಿಗ್ಮಿ ಹಣವನ್ನು ತುಂಬಿಸಿಕೊಂಡಿದ್ದರು ಮತ್ತು ನನ್ನಿಂದ ಸಾಲದ ಭದ್ರತೆ ಕುರಿತು 02 ಸಹಿ ಮಾಡಿದ ಖಾಲಿ ಚೆಕ್ಕುಗಳನ್ನು ಪಡೆದುಕೊಂಡಿದ್ದರು. ಪಿರ್ಯಾದಿ ಕಂಪನಿ 04 ಲಕ್ಷ ರೂ ಸಾಲ ನೀಡಿದ ನಂತರ ನನ್ನಿಂದ ಪ್ರತಿದಿನ ಪಿಗ್ಮಿ ಹಣ ಮತ್ತು ಸಾಲದ ಹಣ ಎರಡನ್ನೂ ತುಂಬಿಸಿಕೊಳ್ಳುತ್ತಿದ್ದರು. ಪಿರ್ಯಾದಿ ಕಂಪನಿ ಸಾಲದ ಹಣದ ಮೇಲೆ ತಮಗೆ ಇಷ್ಟ ಬಂದ ರೀತಿಯಲ್ಲಿ ಬಡ್ಡಿ ಹಣವನ್ನು ಕೇಳುತ್ತಿದ್ದರು. ಪಿರ್ಯಾದಿ ಕಂಪನಿಯು 04 ಲಕ್ಷ ರೂ ಸಾಲಕ್ಕೆ 01 ಲಕ್ಷ ರೂ ಪಿಗ್ಮಿ ಹಣ ಪಡೆಯುವುದಲ್ಲದೇ ಸದರಿ 04 ಲಕ್ಷ ರೂ ಸಾಲದ ಹಣಕ್ಕೆ ಪ್ರತ್ಯೇಕವಾಗಿ ಬಡ್ಡಿಯನ್ನು ಆಕರಣೆ ಮಾಡಿರುತ್ತಾರೆ. ನಾನು ಪಿರ್ಯಾದಿ ಕಂಪನಿಗೆ ಕೊಡಬೇಕಾಗಿದ್ದ 04 ಲಕ್ಷ ರೂಗಳನ್ನು ಸಂಪೂರ್ಣವಾಗಿ ಪಾವತಿ ಮಾಡಿರುತ್ತೇನೆ. ಆದಾದ ನಂತರ 2019 ರ ಸೆಪ್ಟೆಂಬರ್-ಅಕ್ಟೋಬರ್ ತಿಂಗಳಲ್ಲಿ ನಾನು ಪಿರ್ಯಾದಿ ಕಂಪನಿಯವರಿಗೆ ನೀವು ಕೊಟ್ಟ ಸಾಲದ ಹಣಕ್ಕೆ ಬಡ್ಡಿ ಆಕರಣೆ ಮಾಡಿರುತ್ತೀರಿ ನಾವು ತುಂಬಿದ ಹಣಕ್ಕೆ ಪಿಗ್ಮಿ ಹಣಕ್ಕೆ ಏಕೆ ಬಡ್ಡಿ ಹಣ ಕೊಡುವುದಿಲ್ಲ ಎಂದು ಕೇಳಿದೆನು ಆಗ ಪಿರ್ಯಾದಿ ಕಂಪನಿ ನಾನು ಇನ್ನೂ ಸಾಲದ ಕಂತಿನ ಹಣ ತುಂಬುವುದು ಬಾಕಿ ಇರುತ್ತದೆ ಎಂದು ತಿಳಿಸಿದರು. ಪಿರ್ಯಾದಿ ಕಂಪನಿಯು 30 ಸಾವಿರ ರೂಗಳನ್ನು ತುಂಬಲು

ಹೇಳಿದರು ಆಗ ನಾನು ಪಿಗ್ಮಿ ಹಣವನ್ನು ತುಂಬಿದ್ದರ ಕುರಿತು ಬಡ್ಡಿ ಹಣ ನೀಡಿ ಅದಕ್ಕೆ ಇದಕ್ಕೆ ಸರಿಹೋಗುತ್ತದೆ ಎಂದು ಹೇಳಿದ್ದಕ್ಕೆ ಪಿರ್ಯಾದಿ ಕಂಪನಿಯರು ನನ್ನ ಮೇಲೆ ಕೋಪ ಮಾಡಿಕೊಂಡು ನನ್ನ ವಿರುದ್ಧ ಪ್ರಸ್ತುತ ಸುಳ್ಳು ಪಿರ್ಯಾದಿಯನ್ನು ದಾಖಲಿಸಿರುತ್ತಾರೆ.

2. ನಾನು ಪಿರ್ಯಾದಿ ಕಂಪನಿಗೆ ಸಾಲದ ಹಣವನ್ನು ಮತ್ತು ಪಿಗ್ಮಿ ಹಣವನ್ನು ತುಂಬಿದ ಕುರಿತು ಇರುವ ಒಟ್ಟು 08 ರಸೀದಿಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ಸದರಿ ರಸೀದಿಗಳನ್ನು ನಿಡಿ.1 ರಿಂದ 8 ಎಂದು ಗುರುತಿಸಲಾಯಿತು. ನಾನು ಪಿರ್ಯಾದಿ ಕಂಪನಿಯಿಂದ ಸಾಲ ಪಡೆಯುವಾಗ ಸದರಿ ಸಾಲದ ಭದ್ರತೆ ಕುರಿತು ನೀಡಿದ್ದ ಸಹಿ ಮಾಡಿದ ಖಾಲಿ ಚೆಕ್ಕುಗಳನ್ನು ದುರುಪಯೋಗ ಪಡಿಸಿಕೊಂಡು ಪಿರ್ಯಾದಿ ಕಂಪನಿ ಪ್ರಸ್ತುತ ಸುಳ್ಳು ಪಿರ್ಯಾದಿಯನ್ನು ದಾಖಲಿಸಿದ್ದು ಕಾರಣ ಪಿರ್ಯಾದುದಾರರ ಪಿರ್ಯಾದಿಯನ್ನು ವಜಾ ಮಾಡಿ ನನ್ನನ್ನು ದೋಷಮುಕ್ತನೆಂದು ನಿರ್ಣಯಿಸಿ ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**<u>ಪಾಟೀ ಸವಾಲುಃ ಪಿರ್ಯಾದು ಪರ ವಕೀಲರಿಂದಃ</u>**

(ಪಿರ್ಯಾದಿ ಮತ್ತು ಪಿರ್ಯಾದುದಾರರ ಪರ ವಕೀಲರು ಗೈರು ಹಾಜರಿದ್ದು ಕಾರಣ ಪಾಟೀ ಸವಾಲು ಏನೂ ಇಲ್ಲ ಎಂದು ತೆಗೆದುಕೊಳ್ಳಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ**

**28ನೇ ಅ ಮು ನ್ಯಾ ದಂ, ಬೆಂ ನಗರ**